ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 20-12-20

# ಮೇಲ್ಮನೆ ಗದ್ದಲ: ಬಿಜೆಪಿ, ಜೆಡಿಎಸ್ ವಿರುದ್ಧ ಸದಸ್ಯ ರಮೇಶ್ ದೂರು

ಬೆಂಗಳೂರು: ಸಭಾಪತಿಗಳ ಪೀಠವನ್ನು ಅಸಂಸದೀಯ ನಡವಳಿಕೆಯಿಂದ ಅತಿಕ್ರಮಣವಾಗಿ ಅಲಂಕರಿಸಿ ಮೇಲ್ಮನೆಯ ಗೌರವ ಹಾಳುಗೆಡವಿದ ಬಿಜೆಪಿ, ಜೆಡಿಎಸ್ ಸದಸ್ಯರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸಭಾಪತಿ ಪ್ರತಾಪ್‌ಚಂದ್ರಶೆಟ್ಟಿ ಅವರಿಗೆ ಪರಿಷತ್ ಸದಸ್ಯ ಪಿ.ಆರ್. ರಮೇಶ್ ದೂರು ನೀಡಿದ್ದಾರೆ.

ಶನಿವಾರ ನೀಡಿರುವ ದೂರಿನ ಪತ್ರದಲ್ಲಿ, ಡಿ. 15 ರಂದು ನಡೆದ ಅಹಿತಕರ ಘಟನೆಯಿಂದ ಹಲವಾರು ಹಿರಿಯ ಮುತ್ಸದ್ದಿ ನಾಯಕರು ಪ್ರತಿನಿಧಿಸಿದ್ದ ಸದನದ ಘನತೆ ಹಾಳಾಗಿದೆ. ಬಿಜೆಪಿ, ಜೆಡಿಎಸ್ ಪಕ್ಷದವರಿಂದ ಸದನದ ಗೌರವ, ಸಂಪ್ರದಾಯ, ಕಾನೂನು ಎಲ್ಲವೂ ಗಾಳಿಗೆ ತೂರಿದಂತಾಗಿ ಕರ್ನಾಟಕ ರಾಜ್ಯದ ಗೌರವ ಹಾಳಾಗಿದೆ. ಇವರಿಗೆ ಸಂವಿಧಾನ, ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ಕಿಂಚಿತ್ತೂ ಗೌರವವಿಲ್ಲ ಎಂಬುದು ಸಾಬೀತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅನಾರೋಗ್ಯ ಅಥವಾ ವಿದೇಶ ಪ್ರಯಾಣದಲ್ಲಿದ್ದಾಗ ಉಪಸಭಾಪತಿಗಳು ಅಧಿಕಾರ ಚಲಾಯಿಸಬಹುದು. ಆದರೆ ಸಭಾಪತಿಗಳ ಅಧಿಕಾರ ಕಸಿಯುವ ಸಲುವಾಗಿ ಅತಿಕ್ರಮಣವಾಗಿ ಸಭಾಪತಿ ಸ್ಥಾನ ಅಲಂಕರಿಸಿರುವುದು ಕಾನೂನು ಬಾಹಿರ. ಹೀಗಾಗಿ ಬಿಜೆಪಿ, ಜೆಡಿಎಸ್ ಸದಸ್ಯರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.